ನಿಮ್ಮೊಡನೆ

# ರಕ್ತ ವ್ಯರ್ಥವಾಗದಿರಲಿ

ರಕ್ತ ಬ್ಯಾಂಕ್‌ಗಳಿಗೆ ಸಂಬಂಧಿಸಿದ ನ್ಯೂನತೆಗಳ ಬಗ್ಗೆ ಸರ್ಕಾರ ತುರ್ತು ಗಮನ ಹರಿಸಬೇಕಿದೆ. ಒಂದೆಡೆ ಜನರಲ್ಲಿ ರಕ್ತದಾನಕ್ಕೆ ಸಂಬಂಧಿಸಿ ಇರುವ ಮೂಢನಂಬಿಕೆಗಳನ್ನು ಹೋಗಲಾಡಿಸಲು ಜನಾಂದೋಲನ ನಡೆಸಬೇಕಿದೆ. ಇನ್ನೊಂದೆಡೆ ಜನರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಲು ಮುಂದೆ ಬರುವಂತೆ ಜಾಗೃತಿ ಮೂಡಿಸಬೇಕಿದೆ.


ರಕ್ತದಾನದ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಜನರಲ್ಲಿ ಸಾಕಷ್ಟು ಅರಿವು ಮೂಡಿದೆ. ದಾನಿಗಳ ಸಂಖ್ಯೆಯೂ ಬೆಳೆಯುತ್ತಿದೆ. ಆದರೆ ರಾಷ್ಟ್ರೀಯ ಮಟ್ಟದಲ್ಲಿ ಪರಿಸ್ಥಿತಿ ಅಷ್ಟೇನೂ ಆಶಾದಾಯಕವಾಗಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯ ಸಮೀಕ್ಷೆಯ ಪ್ರಕಾರ, ಭಾರತದಲ್ಲಿ ಪ್ರತಿ ವರ್ಷ 1.2 ಕೋಟಿ ಯುನಿಟ್‌ಗಳಷ್ಟು ರಕ್ತದ ಅವಶ್ಯಕತೆ ಬೀಳುತ್ತಿದೆ. ಆದರೆ ಸಂಗ್ರಹವಾಗುತ್ತಿರುವ ರಕ್ತದ ಯುನಿಟ್‌ಗಳು 90 ಲಕ್ಷ ಮಾತ್ರ. ಅಂದರೆ ಬೇಕಾಗುವ ರಕ್ತದ ಸಂಗ್ರಹದಲ್ಲೇ ಸಾಕಷ್ಟು ಕೊರತೆಯಿದೆ. ಗಾಯದ ಮೇಲೆ ಬರೆ ಎಳೆದಂತೆ, ಇದೀಗ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ (ನ್ಯಾಕೊ) ಹೊಸ ಮಾಹಿತಿಯೊಂದನ್ನು ಬಹಿರಂಗ ಪಡಿಸಿದೆ. ನ್ಯಾಕೊ ವರದಿಯ ಪ್ರಕಾರ, ದೇಶದಲ್ಲಿ ಕಳೆದ ಐದು ವರ್ಷಗಳಲ್ಲಿ 28 ಲಕ್ಷ ಯುನಿಟ್‌ಗಳಷ್ಟು ರಕ್ತ ನಿರುಪಯುಕ್ತ ಎಂದು ತಿರಸ್ಕರಿಸಲಾಗಿದೆ! ಅಂದರೆ ರಕ್ತವನ್ನು ಸಂಗ್ರಹಿಸುವ ಮತ್ತು ನಿರ್ವಹಿಸುವ ವಿಧಾನದಲ್ಲಿ ಉಂಟಾಗಿರುವ ಲೋಪದಿಂದಾಗಿ 28 ಲಕ್ಷ ಯುನಿಟ್‌ಗಳಷ್ಟು ರಕ್ತ ವ್ಯರ್ಥವಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಸಮೀಕ್ಷೆಯಲ್ಲಿ, ಭಾರತದ ರಕ್ತದ ಬ್ಯಾಂಕ್‌ಗಳಿಗೆ ಸಂಬಂಧಿಸಿ ಪ್ರಕಟಿಸಿರುವ ಹಲವಾರು ಮಾಹಿತಿಗಳತ್ತ ನಾವು ತುರ್ತಾಗಿ ಗಮನ ಹರಿಸಬೇಕಿದೆ. ದೇಶದಲ್ಲಿ ಪ್ರತಿವರ್ಷ ಸುಮಾರು 23.4 ಕೋಟಿ ಪ್ರಮುಖ ಶಸ್ತ್ರಚಿಕಿತ್ಸೆಗಳು ನಡೆಯುತ್ತಿವೆ. 6.3 ಕೋಟಿಯಷ್ಟು ಪ್ರಜ್ಞಾಹೀನ ಸ್ಥಿತಿಯಲ್ಲಿರುವ ರೋಗಿಗಳ ಶಸ್ತ್ರಚಿಕಿತ್ಸೆ, 3.1 ಕೋಟಿ ಕ್ಯಾನ್ಸರ್ ಸಂಬಂಧಿತ ಶಸ್ತ್ರವಿಧಾನಗಳು ಮತ್ತು ಒಂದು ಕೋಟಿ ಹೆರಿಗೆ ಸಂಬಂಧಿತ ಶಸ್ತ್ರಚಿಕಿತ್ಸೆಗಳು ನಡೆಯುತ್ತವೆ. ಇದೂ ಅಲ್ಲದೆ ದೇಶಾದ್ಯಂತ ಸಾಕಷ್ಟು ರಸ್ತೆ ಅಪಘಾತಗಳು ನಡೆಯುತ್ತಿದ್ದು ಅದರಲ್ಲಿ ಗಾಯಗೊಂಡವರಿಗೂ ತುರ್ತು ರಕ್ತದ ಅಗತ್ಯ ಇರುತ್ತದೆ. ಒಟ್ಟು ಶೇಖರಣೆಯಲ್ಲಿ 30 ಲಕ್ಷ ಯುನಿಟ್‌ಗಳಷ್ಟು ರಕ್ತದ ಕೊರತೆಯಿದೆ. ಇದರ ಜತೆಗೆ ಸಂಗ್ರಹವಾದ ರಕ್ತದಲ್ಲೂ ಪ್ರತಿವರ್ಷ ಐದೂವರೆ ಲಕ್ಷದಷ್ಟು ಯುನಿಟ್‌ಗಳು ಸಂಗ್ರಹಣೆ ಮತ್ತು ನಿರ್ವಹಣೆಯ ಲೋಪದಿಂದ ವ್ಯರ್ಥವಾಗುತ್ತಿರುವುದು ಅಕ್ಷಮ್ಯ ಅಪರಾಧ ಎನ್ನದೆ ವಿಧಿಯಿಲ್ಲ.

2016ರಲ್ಲಿ ‘ನ್ಯಾಕೊ’ ಬೆಂಬಲದ ಸಮೀಕ್ಷೆಯೊಂದರ ಪ್ರಕಾರ, ದೇಶದ 87 ಜಿಲ್ಲೆಗಳಲ್ಲಿ ರಕ್ತ ಬ್ಯಾಂಕ್‌ಗಳೇ ಇಲ್ಲ. ಅಂದರೆ ಆ ಜಿಲ್ಲೆಗಳಲ್ಲಿ ಯಾವುದೇ ರೋಗಿಗೆ ರಕ್ತದ ತುರ್ತು ಅಗತ್ಯ ಬಿದ್ದರೆ ನೆರೆಯ ಜಿಲ್ಲೆಯ ಸಂಗ್ರಹದಿಂದ ರಕ್ತವನ್ನು ತರಿಸಿಕೊಳ್ಳಬೇಕು. ಈ ಜಿಲ್ಲೆಗಳಲ್ಲಿ ‘ಇಂತಹ ದಿನವೇ ಆಗಬೇಕು’ ಎಂದು ಪೂರ್ವನಿರ್ಧಾರವಾದ ಶಸ್ತ್ರಚಿಕಿತ್ಸೆಗೆ ರಕ್ತವನ್ನು ಮುಂಚಿತವಾಗಿ ಹೊಂದಿಸಿಕೊಳ್ಳಬಹುದು. ಆದರೆ ಅಪಘಾತದಂತಹ ತುರ್ತು ಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆಗೆ ರಕ್ತದ ಅಗತ್ಯವಿರುವ ಸಂತ್ರಸ್ತರನ್ನು ಉಳಿಸಿಕೊಳ್ಳುವುದು ಕಷ್ಟ. ಕೇಂದ್ರ ಆರೋಗ್ಯ ಸಚಿವಾಲಯವು ಮಾರ್ಗದರ್ಶಿ ಸೂತ್ರಗಳ ಪ್ರಕಾರ ಪ್ರತಿ ಜಿಲ್ಲೆಯಲ್ಲೂ ಒಂದಾದರೂ ರಕ್ತ ಬ್ಯಾಂಕ್ ಇರಲೇಬೇಕು. ದೇಶಾದ್ಯಂತ ಇರುವ ಸುಮಾರು 1000 ದಷ್ಟು ಸಾರ್ವಜನಿಕ ರಕ್ತ ಬ್ಯಾಂಕ್‌ಗಳ ಪೈಕಿ ಶೇಕಡಾ 74ರಷ್ಟು ರಕ್ತ ಬ್ಯಾಂಕ್‌ಗಳಲ್ಲಿ ಮೂಲಸೌಲಭ್ಯಗಳು ಸರಿಯಾಗಿಲ್ಲ. ಶೇಕಡಾ 31ರಷ್ಟು ರಕ್ತ ಬ್ಯಾಂಕ್‌ಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ರಕ್ತ ವರ್ಗೀಕರಣ ಘಟಕಗಳಿಲ್ಲ.

ರಕ್ತ ಬ್ಯಾಂಕ್‌ಗಳಿಗೆ ಸಂಬಂಧಿಸಿದ ನ್ಯೂನತೆಗಳ ಬಗ್ಗೆ ಸರ್ಕಾರ ತುರ್ತು ಗಮನ ಹರಿಸಬೇಕಿದೆ. ಒಂದೆಡೆ ಜನರಲ್ಲಿ ರಕ್ತದಾನಕ್ಕೆ ಸಂಬಂಧಿಸಿ ಇರುವ ಮೂಢನಂಬಿಕೆಗಳನ್ನು ಹೋಗಲಾಡಿಸಲು ಜನಾಂದೋಲನ ನಡೆಸಬೇಕಿದೆ. ಇನ್ನೊಂದೆಡೆ ಜನರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಲು ಮುಂದೆ ಬರುವಂತೆ ಜಾಗೃತಿ ಮೂಡಿಸಬೇಕಿದೆ. ಮಕ್ಕಳಲ್ಲಿ ಶಾಲಾ ಹಂತದಲ್ಲೇ ರಕ್ತದಾನದ ಅಗತ್ಯ ಮತ್ತು ಅನಿವಾರ್ಯತೆಯ ಬಗ್ಗೆ ಸೇವಾ ಮನೋಭಾವ ರೂಪಿಸಬೇಕಿದೆ. ಇವತ್ತು ರಕ್ತದಾನಕ್ಕೆ ನೀಡುವ ಪ್ರೋತ್ಸಾಹಧನವೂ ಇದನ್ನೊಂದು ಲಾಭ ಗಳಿಕೆಯ ಉದ್ಯಮವಾಗಿಸಿದ್ದು ಹಲವೆಡೆ ಕಂಡುಬರುತ್ತಿದೆ. ಹಲವೆಡೆ ಸಾಮೂಹಿಕ ರಕ್ತದಾನಗಳ ಉದ್ದೇಶ ಒಳ್ಳೆಯದಿದ್ದರೂ ಒಮ್ಮೆಲೆ ಸಂಗ್ರಹವಾಗುವ ಭಾರೀ ಪ್ರಮಾಣದ ರಕ್ತ ಸದ್ಬಳಕೆಯಾಗದಿರುವ ಸಂಭವವೂ ಹೆಚ್ಚಿದೆ. ರಕ್ತದಾನಿಗಳಲ್ಲಿ ಎಚ್‌ಐವಿ ಸೋಂಕಿನ ಪತ್ತೆಯಿಂದಾಗಿ ದೊಡ್ಡ ಸಂಖ್ಯೆಯ ದಾನಿಗಳ ರಕ್ತದ ಬಳಕೆಯೂ ಆಗುವುದಿಲ್ಲ. ಸರ್ಕಾರ ರಕ್ತದ ಸಂಗ್ರಹ ಮತ್ತು ನಿರ್ವಹಣೆಗೆ ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯನ್ನು ವ್ಯಾಪಕಗೊಳಿಸಬೇಕು. ಇದಕ್ಕಾಗಿ ಮಾಹಿತಿ ತಂತ್ರಜ್ಞಾನದ ನೆರವನ್ನು ಪಡೆಯಬೇಕು. ಪ್ರತಿಯೊಂದು ಜಿಲ್ಲೆಗಳಲ್ಲೂ ರಕ್ತದ ಬ್ಯಾಂಕ್‌ಗಳು ಸ್ಥಾಪನೆಯಾಗಿ, ರಕ್ತದ ಲಭ್ಯತೆಯ ಮಾಹಿತಿ ಆನ್‌ಲೈನ್‌ನಲ್ಲಿ ಸಿಗುವಂತೆ ನೋಡಿಕೊಳ್ಳಬೇಕು. ■

**ಬಿ.ಎಂ.ಹನೀಫ್**




ಈಶ್ವರ